

بِسۡمِ اللّٰهِ الرَّحۡمٰنِ الرَّحِيۡمِ

# ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನ ಲಭಿಸಿ ಅಹ್ಮದಿಯತ್ ಸ್ವೀಕರಿಸಿದ ಕೆಲವು ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **26–08–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬ್ರಿಟನಿನ ಜಲ್ಸದ ದ್ವಿತೀಯ ದಿನ ಅಲ್ಲಾಹನ ಅನುಗ್ರಹಗಳ ಸುರಿಮಳೆಯ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ವಿವಿಧ ವಿಭಾಗಳ ಅಂಕಿ ಅಂಶಗಳನ್ನು ವಿವರಿಸಲಾಗುತ್ತಿದೆ. ಜಮಾಅತ್ ಅಭಿವೃದ್ಧಿ ಹೊಂದಿದ ಬಗ್ಗೆ ಅಂಕಿ ಅಂಶಗಳೊಂದಿಗೆ ಅವುಗಳಿಗೆ ಸಂಬಂಧಿಸಿದ ಘಟನೆಗಳನ್ನೂ ಸಹ ನಾನು ವಿವರಿಸುತ್ತೇನೆ. ಆದರೆ ಒಂದೂವರೆ ಎರಡು ಘಂಟೆಗಳ ಭಾಷಣದಲ್ಲಿ ಅಂಕಿ ಅಂಶಗಳ ಪೂರ್ಣ ವಿವರಣೆ ನೀಡಲಾಗುವುದಿಲ್ಲ ಮತ್ತು ಘಟನೆಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ನಾನು ಓದಲು ತಂದ ಟಿಪ್ಪಣಿಗಳನ್ನು ಸಾಮಾನ್ಯವಾಗಿ ಓದದೆ ತೆಗೆದುಕೊಂಡು ಹೋಗುತ್ತೇನೆ. ಈ ಅಂಕಿ ಅಂಶಗಳನ್ನು ತಹ್‌ರೀಕ್ ಜದೀದ್ ವಿಭಾಗವು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತದೆ. ಇಂತಹ ಘಟನೆಗಳನ್ನು ನಾನು ವಿವಿಧ ಸಂದರ್ಭಗಳಲ್ಲಿ ವಿವರಿಸುತ್ತಾ ಇರುತ್ತೇನೆ. ಈ ದಿನ ಸಹ ಕೆಲವು ಘಟನೆಗಳನ್ನು ನಾನು ವಿವರಿಸುವೆನು. ಲೋಕದ ವಿವಿಧ ದೇಶಗಳಲ್ಲಿರುವ ಜನರಿಗೆ ಹೇಗೆ ಅಲ್ಲಾಹನು ಪ್ರೇರೇಪಣೆ ನೀಡುತ್ತಾನೆಂದು ಈ ಘಟನೆಗಳಿಂದ ತಿಳಿಯುತ್ತದೆ. ಕೆಲವರಿಗೆ ಅಲ್ಲಾಹನು ಸ್ವಪ್ನಗಳ ಮೂಲಕ ಅಹ್ಮದಿಯ್ಯತಿನ ಸತ್ಯತೆಯನ್ನು ತಿಳಿಸುತ್ತಾನೆ. ಕೆಲವು ಸ್ಥಳಗಳಲ್ಲಿ ಯಾವುದಾದರೂ ಪುಸ್ತಕ ಅಥವಾ ಸಾಹಿತ್ಯ ತಬ್ಲೀಗ್‌ಗೆ ಕಾರಣವಾಗುತ್ತದೆ. ಕೆಲವು ಸ್ಥಳಗಳಲ್ಲಿ ಅಹ್ಮದಿಯ್ಯತಿನ ವಿರುದ್ಧ ನಡೆಸಲಾಗುವ ಪ್ರಚಾರವೇ ಅಹ್ಮದಿಯ್ಯತ್ ಬೆಳೆಯಲು ಉತ್ತೇಜಕವಾಗುತ್ತದೆ. ಕೆಲವು ಸ್ಥಳಗಳಲ್ಲಿ ಅಹ್ಮದಿಯರ ಸ್ವಭಾವಗುಣಗಳು ಅನ್ಯರನ್ನು ಅಹ್ಮದಿಯರ ಕಡೆಗೆ ಗಮನಿಸುವಂತೆ ಮಾಡುತ್ತದೆ. ಕೆಲವು ಘಟನೆಗಳು ಹೇಗಿವೆ ಎಂದರೆ ದೂರದ ದೇಶಗಳಲ್ಲಿ ವಾಸಿಸುವ ಜನರು ಅಹ್ಮದಿಯ್ಯತ್ ಬಗ್ಗೆ ದೃಢವಿಶ್ವಾಸ ಹೊಂದಿದ ಆಶ್ಚರ್ಯಕರ ದೃಶ್ಯಗಳನ್ನು ತೋರಿಸುತ್ತವೆ. ಮಕ್ಕಳ ತರಬೇತಿ ಕಡೆಗೆ ನೋಡುವುದಾದರೆ ಅಹ್ಮದಿಯ್ಯತ್ ಸ್ವೀಕರಿಸಿದ ಕಾರಣ ಅಥವಾ ಅಹ್ಮದಿಯರ ಸಹವಾಸದಲ್ಲಿದ್ದ ಕಾರಣ ಮಕ್ಕಳಲ್ಲಿ ಆಶ್ಚರ್ಯಕರ ಪರಿವರ್ತನೆ ಉಂಟಾಗುತ್ತದೆ. ಅದನ್ನು ಅನ್ಯರು ಸಹ ಮನವರಿಕೆ ಮಾಡದಿರುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ನ್ಯಾಯನಿಷ್ಠ ದೃಷ್ಟಿಯಿಂದ ನೋಡುವುದಾದರೆ ನಾವು ಒಂದು ನಿಝಾಮ್ (ವ್ಯವಸ್ಥೆ) ಮೂಲಕ ಇಸ್ಲಾಮ್ ಧರ್ಮದ ನೈಜ ಸಂದೇಶವನ್ನು ತಲಪಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಖಂಡಿತವಾಗಿಯೂ ಹೇಳಬಹುದು. ಆದರೆ ಅಲ್ಲಾಹನು ಅದಕ್ಕೆ ನೀಡುವ ಪ್ರತಿಫಲ ನಾವು ಮಾಡುವ ಪ್ರಯತ್ನಕ್ಕಿಂತ ಹೆಚ್ಚಿಗೆ ಇರುತ್ತವೆ. ಅಹ್ಮದಿಯ್ಯತ್‌ನ ಅಭಿವೃದ್ಧಿ ನಮ್ಮ ಪ್ರಯತ್ನ ಅಥವಾ ಸಾಧನ ಸಾಮಗ್ರಿಗಳ ಮೂಲಕವಲ್ಲ, ಅದು ಅಲ್ಲಾಹನ ಅನುಗ್ರಹದಿಂದ ಸಂಭವಿಸುತ್ತದೆ. ಈಗ ನಾನು ಕೆಲವು ಘಟನೆಗಳನ್ನು ವಿವರಿಸುವೆನು.

ಗಿನಿ ಕನಾಕರಿ ದೇಶದ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಅಹ್ಮದಿಯಾ ಜಮಾಅತನ್ನು ಪರಿಚಯಿಸಿ ಕೊಡುವ ಎರಡು ಪುಟಗಳ ಕರಪತ್ರ ಅಲ್ಲಾಹನ ಅನುಗ್ರಹದಿಂದ ದೇಶದಾದ್ಯಂತ ವಿತರಿಸಲಾಗಿದೆ. ಈ ದೇಶದ ದೂರ ಪ್ರದೇಶಗಳಿಂದ ನಮಗೆ ಫೋನ್ ಕರೆಗಳು ಬರುತ್ತಾ ಇವೆ. ಅವರು ಹೇಳುತ್ತಾರೆ: ‘‘ನಮ್ಮ ಹಿರಿಯರು ಇಮಾಮ್ ಮಹ್‌ದಿ ಮತ್ತು ಮಸೀಹ್ ಆಗಮಿಸುವ ಬಗ್ಗೆ ನಮ್ಮೊಂದಿಗೆ ಹೇಳುತ್ತಾ ಇದ್ದರು. ನೀವು ಪ್ರಕಟಿಸಿದ ಕರಪತ್ರ ನೋಡಿದ ನಂತರ ನಿಮ್ಮನ್ನು ಭೇಟಿಯಾಗುವ ಇಚ್ಛೆಯಾಗುತ್ತಿದೆ. ಏಕೆಂದರೆ ಇದು ಮುಸ್ಲಿಮ್ ಸಮುದಾಯಕ್ಕೆ ಒಬ್ಬ ಸುಧಾರಕನ ಆವಶ್ಯಕತೆ ಇರುವ ಕಾಲವಾಗಿದೆ ಎಂದು ನಮಗೆ ತೋರುತ್ತದೆ.’’ ಅಲ್ಲಾಹನ ಅನುಗ್ರಹದಿಂದ ಅನೇಕ ಜನರೊಂದಿಗೆ ನಾವು ಸಂಪರ್ಕ ಸಾಧಿಸಿದೆವು ಮತ್ತು ಅವರು ಬೈಅತ್ ಮಾಡಿ ಜಮಾಅತ್‌ಗೆ ಸೇರಿದ್ದಾರೆ.

ಕರಪತ್ರ ಅಹ್ಮದಿಯಾ ಜಮಾಅತನ್ನು ಪರಿಚಯಿಸಿ ಕೊಡುವ ಒಂದು ಮಾರ್ಗ ಮಾತ್ರವಾಗಿದೆ. ಆದರೆ ಅಲ್ಲಾಹನು ಜನರ ಹೃದಯಗಳನ್ನು ಮೊದಲೇ ಸಿದ್ಧಪಡಿಸಿಟ್ಟಿದ್ದನು. ಬುದ್ಧಿಶಾಲಿಗಳು ಗ್ರಹಿಸುತ್ತಾರೆ, ಈ ಕಾಲಘಟ್ಟ ಒಬ್ಬ ಸುಧಾರಕನ ಆವಶ್ಯಕತೆ ಇರುವ ಕಾಲವಾಗಿದೆ ಎಂದು. ಮಸೀಹ್ ಮತ್ತು ಮಹ್‌ದಿಯ ಆವಶ್ಯಕತೆ ಇದೆ ಎಂದು ಅವರು ಭಾವಿಸುತ್ತಾರೆ. ಇಷ್ಟು ದೂರವಿರುವ ಪ್ರದೇಶದಲ್ಲಿ ಯಾರದಾದರೂ ಪ್ರಭಾವದಿಂದ ಜನರು ಅಹ್ಮದಿಯ್ಯತ್ ಸ್ವೀಕರಿಸಿದರೆಂದು ಹೇಳಲು ಹೇಗೆ ತಾನೆ ಸಾಧ್ಯ? ಅಥವಾ ಅಹ್ಮದಿಯ್ಯತ್ ಬಗ್ಗೆ ಸಮಾಚಾರ ತಲಪಿತೆಂದು ಹೇಳಲು ಹೇಗೆ ಸಾಧ್ಯ? ಇದು ಅಲ್ಲಾಹನ ಕೆಲಸವೇ ಆಗಿದೆ. ಯಾವುದೇ ಮನುಷ್ಯನ ಪ್ರಯತ್ನ ಇದರಲ್ಲಿ ಪ್ರವೇಶಿಸಿಲ್ಲ.

ತಾನ್‌ಝಾನಿಯಾ ದೇಶದ ಟೋಡುಮಾ ನಗರದ ಮುಬಲ್ಲಿಗ್ ಬರೆಯುತ್ತಾರೆ: ಇಲ್ಲಿ ಪವಿತ್ರ ಖುರ್‌ಆನಿನ ಪ್ರದರ್ಶನ ಜರಗಿಸಿದಾಗ ಒಬ್ಬ ಮಹಿಳೆ ನಮ್ಮ ಸ್ಟಾಲಿಗೆ ಬಂದು ಬಹಳ ಆಶ್ಚರ್ಯದಿಂದ ಇದು ಮುಸ್ಲಿಮರ ಸ್ಟಾಲೋ? ಎಂದು ವಿಚಾರಿಸಿದರು. ಅನಂತರ ಅವರು ವಿವಿಧ ಪುಸ್ತಕಗಳನ್ನು ನೋಡುತ್ತಾ ಇದ್ದರು. ಕೊನೆಗೆ ಒಂದು ಪುಸ್ತಕ ಖರೀದಿಸಿದರು. ಅದರಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ವಿವರಣೆಗಳಿದ್ದುವು. ಮರುದಿನ ಅದೇ ಮಹಿಳೆ ತನ್ನ ಪತಿಯೊಂದಿಗೆ ಸ್ಟಾಲಿಗೆ ಆಗಮಿಸಿದರು. ಅವರಿಬ್ಬರೂ ಸೈನಿಕ ಉಡುಪು ಧರಿಸಿದ್ದರು. ಅವರಿಬ್ಬರೂ ಸೈನ್ಯಕ್ಕೆ ಸೇರಿದವರಾಗಿದ್ದರು. ಆ ಮಹಿಳೆ ಹೇಳಿದರು: ಇವರು ನನ್ನ ಪತಿಯಾಗಿದ್ದಾರೆ. ನಾವು ವಿವಾಹವಾಗಿ ಸಾಕಷ್ಟು ವರ್ಷಗಳಾಗಿವೆ. ನಾನು ಮುಸ್ಲಿಮ್ ಮತ್ತು ಇವರು ಕ್ರೈಸ್ತರಾಗಿದ್ದಾರೆ. ನಾನು ದೀರ್ಘಕಾಲದಿಂದ ಇವರಿಗೆ ಇಸ್ಲಾಮಿನ ತತ್ವಗಳನ್ನು ಕಲಿಸಿ ಅವರನ್ನು ಮುಸ್ಲಿಮರನ್ನಾಗಿ ಮಾಡಲು ಪ್ರಯತ್ನಿಸುತ್ತಾ ಇದ್ದೇನೆ. ಆದರೆ ಇಸ್ಲಾಮಿನ ತತ್ವಗಳ ಬಗ್ಗೆ ಉತ್ತಮವಾದ ನಿರೂಪಣೆ ನನಗೆ ಎಲ್ಲಿಯೂ ದೊರಕಲಿಲ್ಲ. ನಿನ್ನೆ ನಿಮ್ಮ ಸ್ಟಾಲಿಗೆ ಬಂದಾಗ ನಾನು ಸರಿಯಾದ ಸ್ಥಳಕ್ಕೆ ಬಂದೆನು ಎಂದು ನನಗೆ ತೋಚಿತು. ನಾನು ನಿಮ್ಮ ಸ್ಟಾಲಿನಿಂದ ಒಂದು ಪುಸ್ತಕ ಖರೀದಿಸಿ ನನ್ನ ಪತಿಯವರಿಗೆ ಕೊಟ್ಟೆನು. ಆ ಪುಸ್ತಕದ ಮೂಲಕ ಅವರಿಗಿದ್ದ ಧಾರಾಳ ಸಮಸ್ಯೆಗಳು ಪರಿಹಾರಗೊಂಡವು. ಉಳಿದ ಸಮಸ್ಯೆಗಳು ಸಹ ನಿಮ್ಮೊಂದಿಗೆ ಮಾತನಾಡುವ ಮೂಲಕ ಪರಿಹರಿಸಲ್ಪಡುವುವು ಎಂದು ನಾನು ಪ್ರತೀಕ್ಷಿಸುತ್ತೇನೆ ಎಂದು ಹೇಳಿದರು. ಅನಂತರ ದೀರ್ಘಕಾಲ ಮುಬಲ್ಲಿಗರೊಂದಿಗೆ ಇಬ್ಬರೂ ಮಾತನಾಡಿದರು. ಅವರಿಬ್ಬರೂ ಬೈಅತ್ ಮಾಡಿ ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮಿಗೆ ಪ್ರವೇಶಿಸಿದರು. ಪತಿಯನ್ನು ಇಸ್ಲಾಮಿಗೆ ಪ್ರವೇಶಗೊಳಿಸಬೇಕೆಂಬ ಅವರ ಸತ್ಯವಾದ ಅಭಿಲಾಷೆ ಅಲ್ಲಾಹನ

ಅನುಗ್ರಹವನ್ನು ಹೇಗೆ ಆಕರ್ಷಿಸಿತೆಂದರೆ ಆ ಮಹಿಳೆ ನಮ್ಮ ಸ್ಟಾಲಿಗೆ ಆಕಸ್ಮಿಕವಾಗಿ ಆಗಮಿಸುವಂತಾಯಿತು. ಅನಂತರ ಅವರಿಬ್ಬರು ನೈಜ ಇಸ್ಲಾಮಿಗೆ ಪ್ರವೇಶಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಿದನು.

ಹರ್ಸ್‌ಫೀಲ್ಡ್ ನಗರದ ಮುಬಲ್ಲಿಗ್ ಬರೆಯುತ್ತಾರೆ: ಈ ನಗರದ ಅನೇಕ ಜನರು ಇಸ್ಲಾಮಿನ ಬಗ್ಗೆ ತಿಳಿಯಲು ಬಯಸುತ್ತಿದ್ದಾರೆ. ನಾವು ವಾನ್‌ರ್ಘ್‌ಲೇ ಟೌನ್‌ನಲ್ಲಿ ಕರಪತ್ರ ವಿತರಣೆ ಮಾಡಿದೆವು. ಆ ಮೂಲಕ ಅಲ್ಲಿನವರೊಂದಿಗೆ ಸಂಪರ್ಕ ಸ್ಥಾಪಿಸಲಾಯಿತು. ಸ್ವಲ್ಪ ಕಾಲಾವಧಿಯ ನಂತರ ಆ ಪಟ್ಟಣದಿಂದ ಐವತ್ತಕ್ಕಿಂತ ಹೆಚ್ಚು ಜನರು, ಪುರುಷರೂ ಮಹಿಳೆಯರೂ ಒಂದು ವಾಹನದಲ್ಲಿ ಹರ್ಸ್‌ಫೀಲ್ಡ್‌ನ ನಮ್ಮ ಮಸ್‌ಜಿದ್‌ಗೆ ಆಗಮಿಸಿದರು. ಅವರ ಉದ್ದೇಶ ಇಸ್ಲಾಮಿನ ಕುರಿತು ತಿಳಿಯಬೇಕು ಎಂದಾಗಿತ್ತು. ಅವರೊಂದಿಗೆ ಎರಡುವರೆ ಗಂಟೆಗಳ ಕಾರ್ಯಕ್ರಮ ನಡೆಸಲಾಯಿತು. ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ಅನಂತರ ಪ್ರಶ್ನೋತ್ತರ ಕಾರ್ಯಕ್ರಮ ಸಹ ಜರಗಿತು.

ಜನರು ಸ್ವತಃ ಬಂದು ಶ್ರದ್ಧೆಯಿಂದ ಆಲಿಸುವುದು ಸಹ ಒಂದು ಉತ್ತಮ ಸೂಚನೆಯಾಗಿದೆ. ಅಲ್ಲಾಹನು ಈಗ ಲೋಕದ ಎಲ್ಲ ಸ್ಥಳಗಳಲ್ಲಿಯೂ ಜನರ ಹೃದಯ ನರಗಳನ್ನು ಅಲುಗಾಡಿಸುತ್ತಾ ಇದ್ದಾನೆ. ದೂರ ಪ್ರದೇಶದ ನಿವಾಸಿಗಳಾದ ಜನರ ಹೃದಯಗಳನ್ನು ವಿಶ್ವಾಸಕ್ಕೆ ಸಂಬಂಧಿಸಿ ಅಲ್ಲಾಹನು ಹೇಗೆ ಬಲಿಷ್ಠಗೊಳಿಸಿದನು ಮತ್ತು ಅವರಲ್ಲಿ ತ್ಯಾಗದ ಮನೋಭಾವ ಹೇಗೆ ಉಂಟುಮಾಡಿದನೆಂದು ನಾವು ನೋಡುತ್ತಿದ್ದೇವೆ. ಬೆನಿನ್ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ. ಅಲಾಡಾ ರೀಜನಿನ ಒಂದು ಜಮಾಅತಾದ ಸೋಕೋದಲ್ಲಿ ಈ ವರ್ಷ ಫೆಬ್ರವರಿಯಲ್ಲಿ ಹೊಸ ಮಸ್‌ಜಿದ್ ನಿರ್ಮಾಣಗೊಂಡಿತು. ಈ ಮಸ್‌ಜಿದ್ ನಿರ್ಮಿಸಲು ಜಮಾಅತಿನ ಜನರು ಬಹಳ ನಿಷ್ಠೆಯಿಂದಲೂ ಪ್ರೀತಿಯಿಂದಲೂ ಭಾಗವಹಿಸಿದರು. ಬಹಳ ಸಮಯ ಮತ್ತು ಹಣ ವಿನಿಯೋಗಿಸಿ ಕೆಲಸಗಾರರಿಗೆ ಸಹಾಯ ಸಹ ಮಾಡುತ್ತಿದ್ದರು. ಮಹಿಳೆಯರು ದೂರ ಸ್ಥಳಗಳಿಂದ ನೀರನ್ನು ತಂದು ಮಸ್‌ಜಿದ್ ನಿರ್ಮಾಣದಲ್ಲಿ ಭಾಗವಹಿಸುತ್ತಿದ್ದರು. ಇಲ್ಲಿನ ಸ್ಥಳೀಯ ಅಧ್ಯಕ್ಷರು ಹೇಳಿದರು: ಈ ಮಸ್‌ಜಿದ್ ಈ ಪ್ರದೇಶದ ಜನರಿಗೆ ಶಾಂತಿಭರಿತ ಇಸ್ಲಾಮಿನ ವಾಸಸ್ಥಾನವಾಗಿದೆ. ಅಲ್ಲಿನ ಚೀಫ್ ಹೇಳಿದರು: ಅಲಾಡಾ ರೀಜನಿನ ಈ ಪ್ರದೇಶಕ್ಕೆ ಈ ಮಸ್‌ಜಿದ್ ನಿಶ್ಚಯವಾಗಿಯೂ ಒಂದು ದೀಪಸ್ತಂಭವಾಗಿದೆ. ಈ ಪ್ರದೇಶದ ಬಹುತೇಕ ಜನರು ವಿಗ್ರಹಾರಾಧಕರಾಗಿದ್ದಾರೆ. ಚೀಫ್ ಹೇಳಿದರು: ನಾನು ಸಹ ಹಿಂದೆ ವಿಗ್ರಹಾರಾದಕನಾಗಿದ್ದೆ. ಈಗ ಅಹ್ಮದಿಯ್ಯತ್ತಿನ ಕಾರಣ ಏಕದೇವ ವಿಶ್ವಾಸಿಯಾಗಿದ್ದೇನೆ. ಈ ಜಮಾಅತ್ ಸತ್ಯ ಮತ್ತು ಪ್ರೀತಿಯ ಸಾಕಾರ ರೂಪವಾಗಿದೆ ಎಂದು ನಾನು ದೃಢವಾಗಿ ಹೇಳುತ್ತೇನೆ. ನಾನೊಬ್ಬ ದೊರೆಯಾಗಿದ್ದರೂ ನನ್ನ ಮೇಲ್ಗಡೆ ಒಬ್ಬ ವೈಭವಶಾಲಿ ಸಾಮ್ರಾಟನಿದ್ದಾನೆ. ಅವನನ್ನು ಆರಾಧಿಸುವುದು ನಮಗೆ ಕಡ್ಡಾಯವಾಗಿದೆ ಎಂಬ ಸತ್ಯ ನನಗೆ ಅಹ್ಮದಿಯಾ ಜಮಾಅತ್ ಮೂಲಕ ತಿಳಿಯಿತು.

ಅಹ್ಮದಿಯ್ಯ ಜಮಾಅತಿನ ಸಂದೇಶ ಸತ್ಯವಾಗಿದೆ, ಇಸ್ಲಾಮಿನ ಉಪದೇಶಗಳೂ ಸತ್ಯ ಎಂಬ ಯೋಚನೆ ಜನರ ಮನಸ್ಸಿನಲ್ಲಿ ಸ್ಪುರಿಸುವಂತೆ ಮಾಡುವುದು ಅಲ್ಲಾಹನೇ ಆಗಿದ್ದಾನೆ. ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಮತ್ತು ಸಂದೇಶವನ್ನು ಅಹ್ಮದಿಯಾ ಜಮಾಅತ್ ಲೋಕದಲ್ಲಿ ಹರಡುತ್ತಾ ಇದೆ. ಈ ಉಪದೇಶಗಳ ಕಾರಣದಿಂದ ಬಹುದೇವಾರಾಧಕರು ಏಕದೇವ ವಿಶ್ವಾಸಿಗಳಾಗುತ್ತಿದ್ದಾರೆ.

ಬೆನಿನ್ ದೇಶದ ಒಬ್ಬ ಮುಅಲ್ಲಿಮ್ ಹೇಳುತ್ತಾರೆ: ಒಂದು ದಿನ ರೇಡಿಯೋದಲ್ಲಿ ತಬ್ಲೀಗ್ ಪ್ರೋಗ್ರಾಮ್ ಮಧ್ಯದಲ್ಲಿ ಗಾನ್ ಓನ್ಟೋ ಎರಿಕ್ ಎಂಬವರ ಫೋನ್ ಬಂತು. ಅವರ ಗ್ರಾಮಕ್ಕೆ ತಬ್ಲೀಗ್ ಮಾಡಲು ಹೋಗಲು ಅವರು ಅಪೇಕ್ಷಿಸಿದರು. ಹಾಗೆ ಅವರು ಫೋನಿನಲ್ಲಿ ತನ್ನ ವಿಳಾಸ ತಿಳಿಸುತ್ತಿದ್ದಾಗ ಫೋನ್ ಕಟ್ ಆಯಿತು. ಅವರಿಗೆ ವಿಳಾಸ ತಿಳಿಸಲು ಸಾಧ್ಯವಾಗಲಿಲ್ಲ. ಅಲ್ಲಿನ ಮುಬಲ್ಲಿಗ್ ಬರೆಯುತ್ತಾರೆ: ನಾವು ತಬ್ಲೀಗ್ ಮಾಡಲು ಸನರ್‌ಪೋತಾ ಗ್ರಾಮಕ್ಕೆ ಹೋದಾಗ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಎದ್ದು ನಿಂತು ಜನರೊಂದಿಗೆ ಹೇಳಿದರು: ಮಿತ್ರರೇ ನಾವು ರೇಡಿಯೋದಲ್ಲಿ ಯಾರ ಮಾತುಗಳನ್ನು ಪ್ರತಿದಿನ ಆಲಿಸುತ್ತೇವೋ ಆ ಜನರು ಈಗ ಇಲ್ಲಿಗೆ ಬಂದಿದ್ದಾರೆ ಎಂದು ಹೇಳಿ ಜನರನ್ನು ಒಟ್ಟುಸೇರಿಸಿದರು. ನಂತರ ಅಲ್ಲಿ ತಬ್ಲೀಗ್ ಮಾಡಿದ ಫಲವಾಗಿ ಇನ್ನೂರಕ್ಕಿಂತ ಹೆಚ್ಚು ಜನರು ಬೈಅತ್ ಮಾಡಿದರು. ಅಲ್ಲಿ ಹೊಸ ಒಂದು ಜಮಾಅತ್ ಸ್ಥಾಪಿತವಾಯಿತು.

ಅಲ್ಲಿನ ಜನರ ವಿಶ್ವಾಸದ ದೃಢತೆಯ ಬಗ್ಗೆ ಸಹ ನೋಡಿರಿ. ಬೈಅತ್ ಮಾಡಿದ ಎರಡು ದಿನಗಳ ನಂತರ ಅಲ್ಲಿ ಬಿರುಗಾಳಿ ಬೀಸಿ ಜೋರಾಗಿ ಮಳೆ ಸುರಿಯಿತು. ಎರಿಕ್ ಸಾಹೇಬರ ಮನೆಯ ಗೋಡೆ ಕುಸಿದು ಬಿದ್ದ ಕಾರಣ ಅವರ ಎಂಟು ತಿಂಗಳು ಪ್ರಾಯದ ಮಗು ಅದರಡಿಯಲ್ಲಿ ಸಿಲುಕಿ ಮೃತವಾಯಿತು. ಅದು ಬಹುದೇವಾರಾಧಕರ ಗ್ರಾಮವಾಗಿದೆ. ಅಲ್ಲಿನ ಬಹುದೇವಾರಾಧಕರು ಹೇಳಿದರು: ನೀವು ಈ ಜಮಾಅತಿನಲ್ಲಿ ಪ್ರವೇಶಿಸಿದ ನಂತರ ನಿಮಗೆ ಕಷ್ಟಗಳು ಬರಲು ಪ್ರಾರಂಭವಾಗಿದೆ. ಆಗ ಎರಿಕ್ ಸಾಹೇಬರು ಹೇಳಿದರು: ನಾನು ಸತ್ಯವನ್ನು ಕಂಡು ನಂಬಿದ್ದೇನೆ. ಮಕ್ಕಳು ಮತ್ತು ಸಂಪತ್ತು ಅಲ್ಲಾಹನೇ ನೀಡುವುದಾಗಿದೆ. ಅವನೇ ಅದನ್ನು ತೆಗೆದುಕೊಳ್ಳುತ್ತಾನೆ. ನಾನು ಈ ಜಮಾಅತನ್ನು ಬಿಟ್ಟುಬಿಡಲಾರೆ. ನಾನು ಅಹ್ಮದಿಯ್ಯತ್ತನ್ನು ಸ್ವೀಕರಿಸಿದ್ದೇನೆ. ನಾನು ಅಹ್ಮದಿಯಾಗಿದ್ದೇನೆ. ಇನ್‌ಶಾಅಲ್ಲಾಹ್ ಮೃತನಾಗುವ ತನಕ ಅಹ್ಮದಿಯಾಗಿಯೇ ಜೀವಿಸುವೆನು. ಇದು ಅವರ ವಿಶ್ವಾಸದ ದೃಢತೆಯಾಗಿದೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅವರ ಹೃದಯದಲ್ಲಿ ಅಲ್ಲಾಹನು ಸ್ಥಾಪಿಸಿದ ಏಕದೇವ ವಿಶ್ವಾಸದಲ್ಲಿ ಅವರು ಸ್ಥಿರವಾಗಿರುವರು. ಅವರು ತನ್ನ ಸ್ವಂತ ಭೂಮಿಯ ಒಂದು ಭಾಗ ನಮಾಝ್ ಸೆಂಟರ್‌ಗೆ ನೀಡಿದರು. ಮಾತ್ರವಲ್ಲ ತಾತ್ಕಾಲಿಕವಾಗಿ ಅವರು ಒಂದು ಚಪ್ಪರದ ವ್ಯವಸ್ಥೆ ಕೂಡಲೆ ಮಾಡಿದರು ಮತ್ತು ಪವಿತ್ರ ಖುರ್‌ಆನ್ ಕಲಿಸುವ ಕ್ಲಾಸ್‌ಗಳನ್ನು ನಡೆಸುವ ವ್ಯವಸ್ಥೆ ಮಾಡಿದರು. ಅಲ್ಲಾಹನು ಈ ರೀತಿ ಅಹ್ಮದಿಯ್ಯತ್ ಅಥವಾ ವಾಸ್ತವಿಕ ಇಸ್ಲಾಮಿನ ಸಂದೇಶ ತಲಪಿಸುವ ಮಾರ್ಗ ತೆರೆಯುತ್ತಾನೆ.

ತಾನ್‌ಝಾನಿಯಾ ದೇಶದ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಶಿಯಾಂಗಾ ರೀಜನಿನಲ್ಲಿ ಒಂದು ಹೊಸ ಜಮಾಅತ್ ಸ್ಥಾಪಿತವಾಯಿತು. ಈ ಪ್ರದೇಶದ ಒಂದು ಗ್ರಾಮದಲ್ಲಿ ತಬ್ಲೀಗ್ ಕಾರ್ಯಕ್ರಮ ನಡೆಯುತ್ತಿದ್ದಾಗ ಅಕಸ್ಮಿಕವಾಗಿ ಅಲ್ಲಿಗೆ ಓರ್ವ ಮಹಿಳೆ ಆಗಮಿಸಿದರು. ಅವರು ಅಹ್ಮದಿಯಾ ಜಮಾಅತಿನ ಸಂದೇಶ ಆಲಿಸಿ ಹೇಳಿದರು: ನೀವು ನಮ್ಮ ಗ್ರಾಮಕ್ಕೆ ಸಹ ಇಸ್ಲಾಮಿನ ಸಂದೇಶ ತನ್ನಿರಿ. ಅಲ್ಲಿ ಸಹ ಕೆಲವು ಮುಸ್ಲಿಮರಿದ್ದಾರೆ. ಒಂದು ಮಸ್‌ಜಿದ್ ಸಹ ಇದೆ. ಆದರೆ ನೀವು ಪ್ರಸ್ತಾಪಿಸುವ ಇಸ್ಲಾಮ್ ಅವರ ಇಸ್ಲಾಮಿಗಿಂತ ಸಂಪೂರ್ಣ ವಿಭಿನ್ನವಾಗಿದೆ ಎಂದು ಹೇಳಿದರು. ನಮ್ಮ ಮುಅಲ್ಲಿಮ್‌ಗಳು ಆ ಗ್ರಾಮಕ್ಕೆ ಹೋಗಿ ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ತಬ್ಲೀಗ್ ಮಾಡಿದರು. ಮೊದಲನೆಯ ದಿನವೇ ಅಲ್ಲಿನ ಮಸ್‌ಜಿದ್‌ನ ಇಮಾಮ್

ಸಮೇತ 93 ಜನರು ಜಮಾಅತ್‌ಗೆ ಸೇರಿದರು. ಆ ಪ್ರದೇಶದ ಸುನ್ನಿ ಮೌಲವಿಗೆ ಈ ವಿಷಯ ತಿಳಿದಾಗ ಆ ಮೌಲವಿ ಆ ಗ್ರಾಮಕ್ಕೆ ಹೋಗಿ "ನೀವು ತಪ್ಪು ದಾರಿ ಹಿಡಿದಿದ್ದೀರಿ, ಆ ಜನರು ಮುಸ್ಲಿಮರಲ್ಲ" ಎಂದು ಹೇಳಿದಾಗ ಅಲ್ಲಿನ ಜನರು ಹೀಗೆ ಹೇಳಿದರು: ನಾವು ಚೆನ್ನಾಗಿ ಯೋಚಿಸಿಯೇ ಅಹ್ಮದಿಯ್ಯತ್ತನ್ನು ಸ್ವೀಕರಿಸಿದ್ದೇವೆ. ಇದೇ ವಾಸ್ತವಿಕ ಇಸ್ಲಾಮ್ ಆಗಿದೆ. ನಾವು ನಿಮ್ಮ ಮಾತಿಗೆ ಕಿವಿಗೊಡಲಾರೆವು ಎಂದು ಹೇಳಿದರು.

ಬೆನಿನ್ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ: ಬೋಹಿಕೋನ್ ರೀಜನ್‌ನಲ್ಲಿ ಒಂದು ಜಮಾಅತಿನಲ್ಲಿ ನಮ್ಮ ಮಸ್‌ಜಿದ್ ನಿರ್ಮಿಸಲಾಗಿದೆ. ಇಲ್ಲಿ 2015 ಮಾರ್ಚ್ ತಿಂಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಯಿತು. 245 ಅಹ್ಮದಿಯರು ಇಲ್ಲಿದ್ದಾರೆ. ಅಲ್ಲಿನ ಅಹ್ಮದಿಯರು ನಿರಂತರ ವಿರೋಧವನ್ನು ಎದುರಿಸುತ್ತಿದ್ದಾರೆ. ಸಂಬಂಧಿಕರು ವಿರೋಧಿಸಿದರು ಮತ್ತು ಆ ಊರಿನ ಅಹ್ಮದಿಯೇತರ ಇಮಾಮ್ ಸಹ ಕಠಿಣವಾಗಿ ವಿರೋಧಿಸಿದರು. ಆ ಊರಿನ ಇಮಾಮ್ ಬೇರೆ ಊರಿನ ಇಮಾಮರನ್ನು ಜಮಾಯಿಸಿ ಜಮಾಅತಿನ ವಿರುದ್ಧ ಅಭಿಯಾನ ಪ್ರಾರಂಭಿಸಿದರು. ಆದರೆ ಅಲ್ಲಾಹನ ಅನುಗ್ರಹದಿಂದ ಇಲ್ಲಿನ ಅಹ್ಮದಿಯರು ಬೈಅತ್ ಪ್ರತಿಜ್ಞೆಗೆ ಬದ್ಧರಾಗಿದ್ದಾರೆ. ಇಲ್ಲಿ ಮಸ್‌ಜಿದ್ ನಿರ್ಮಾಣವಾಗುತ್ತಿದ್ದಾಗ ಅಹ್ಮದಿಯೇತರರ ಮೌಲವಿ ಬಹಿರಂಗವಾಗಿ ವಿರೋಧಿಸಿ ಜನರೊಂದಿಗೆ ಹೇಳಿದರು: ಅಹ್ಮದಿಯರ ಮಸ್‌ಜಿದ್‌ಗಿಂತ ನೀವು ಯಾವುದಾದರೂ ಚರ್ಚ್‌ಗೆ ಹೋಗಿ ನಮಾಝ್ ಮಾಡುವುದು ಉತ್ತಮವೆಂದು. ಮಸ್‌ಜಿದ್ ನಿರ್ಮಿಸುವ ಕೆಲಸ ನಿರ್ವಹಿಸುತ್ತಿದ್ದ ಮೇಸ್ತ್ರಿಯ ಮನೆಗೆ ಹೋಗಿ ನೀನು ಮಸ್‌ಜಿದ್ ನಿರ್ಮಾಣದ ಕೆಲಸ ಮಾಡಬೇಡ ಎಂದು ಬೆದರಿಕೆ ಹಾಕಿದ್ದರು. ಆದರೆ ಈ ಎಲ್ಲ ಬೆದರಿಕೆಗಳಿದ್ದರೂ ಅಲ್ಲಾಹನ ಅನುಗ್ರಹದಿಂದ ಜಮಾಅತ್‌ಗೆ ಇಲ್ಲಿ ಮಸ್‌ಜಿದ್ ನಿರ್ಮಿಸುವ ಭಾಗ್ಯ ಲಭಿಸಿತು. ಹದಿಮೂರು ಮೀಟರ್ ಎತ್ತರವಿರುವ ಎರಡು ಮಿನಾರಗಳು ಸಹ ನಿರ್ಮಿಸಲ್ಪಟ್ಟವು. ಸುಂದರವಾದ ಈ ಮಸ್‌ಜಿದ್‌ನಲ್ಲಿ 375 ಜನರು ನಮಾಝ್ ಅನುಷ್ಠಿಸಬಹುದಾಗಿದೆ.

ಸ್ವಪ್ನಗಳ ಮೂಲಕ ಸಹ ಅಲ್ಲಾಹನು ಮಾರ್ಗದರ್ಶನ ನೀಡುತ್ತಾನೆ. ಐವರಿಕೋಸ್ಟ್ ದೇಶದ ಸಾನ್ ಪೆಡ್ರೋ ರೀಜನಿನ ಒಬ್ಬ ವ್ಯಕ್ತಿ ಜೂನಾಮ್ ಅಹ್ಮದ್ ಬೈಅತ್ ಮಾಡಿದರು. ಕ್ರೈಸ್ತರಾಗಿದ್ದ ಅವರು ಮುಸ್ಲಿಮರಾಗಿ ವಹ್ಹಾಬಿ ಪಂಗಡವನ್ನು ಸೇರಿದ್ದರು. ಅವರು ಇಸ್ಲಾಮ್‌ಗೆ ಸೇರಿದ ನಂತರ ನಮಾಝ್ ಕಲಿತರು. ಮಸ್‌ಜಿದ್‌ಗೆ ಹೋಗಿ ನಮಾಝ್ ಮಾಡುತ್ತಾ ಇದ್ದರು. ಅವರು ಹೇಳುತ್ತಾರೆ: ಅವರು ಸ್ವಪ್ನದಲ್ಲಿ ಎರಡು ಸಾರಿ ಒಬ್ಬ ಹಿರಿಯ ವ್ಯಕ್ತಿಯನ್ನು ಕಂಡರು. ಅವರು ಅಲ್ಲಾಹನ ಪ್ರವಾದಿ ಎಂದು ಸ್ವಪ್ನದಲ್ಲಿ ಅವರಿಗೆ ತಿಳಿಯಿತು. ಪ್ರಾಯಶಃ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿರಬಹುದು ಎಂದು ಅವರು ಭಾವಿಸಿದರು. ಸ್ವಲ್ಪ ಕಾಲದ ನಂತರ ಪುನಃ ಅವರು ಇನ್ನೊಂದು ಸ್ವಪ್ನ ಕಂಡರು. ಟಿ.ವಿ.ಯಲ್ಲಿ ಅದೇ ಆ ಹಿರಿಯರ ಚಿತ್ರ ಪ್ರದರ್ಶಿಸಲಾಗುತ್ತಿದೆ. ಆಗ ಒಬ್ಬರು ಪವಿತ್ರ ಖುರ್‌ಆನ್ ತಿಲಾವತ್ ಮಾಡುತ್ತಿದ್ದಾರೆ. ಟಿ.ವಿ.ಯಲ್ಲಿ ಕೆಳಗೆ ಫ್ರೆಂಚ್ ಭಾಷೆಯಲ್ಲಿ "ಮಿಶನ್ ಇಸ್ಲಾಮಿಕ್ ಅಹ್ಮದಿಯಾ" ಎಂದು ಬರೆದಿತ್ತು. ಈ ಸ್ವಪ್ನ ಕಂಡ ನಂತರ ಮಸ್‌ಜಿದ್‌ನ ಇಮಾಮರೊಂದಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ಕೇಳಿದರು. ಇಮಾಮ್ ಸಾಹೇಬರು ಮೊದಲು ಸರಿಯಾದ ಉತ್ತರ ನೀಡಲಿಲ್ಲ. ಆದರೆ ಅವರನ್ನು ಒತ್ತಾಯಿಸಿದಾಗ ಹೇಳಿದರು: ಅವರು ಅಹ್ಮದಿಯರು. ಅವರು ಮುಸ್ಲಿಮರಲ್ಲ. ನಿಮ್ಮನ್ನು ಯಾರು ದಾರಿ ತಪ್ಪಿಸಿದರು. ನೀವು ನಿಮ್ಮ ಇಸ್ಲಾಮನ್ನು ಏಕೆ ನಾಶ ಮಾಡಲು ಪ್ರಯತ್ನಿಸುತ್ತಿರುವಿರಿ? ಎಂದು ಕೇಳಿದರು. ಅವರು ಆ ಮೌಲವಿಯೊಂದಿಗೆ ಹೇಳಿದರು– ನನ್ನನ್ನು ಯಾರೂ ದಾರಿ ತಪ್ಪಿಸಲಿಲ್ಲ. ಏಕೆಂದರೆ ನಾನು ಇಷ್ಟರವರೆಗೆ ಯಾವ ಅಹ್ಮದಿಯನ್ನೂ ಭೇಟಿಯಾಗಿಲ್ಲ. ನನಗೆ ಅಲ್ಲಾಹನೇ ಅಹ್ಮದಿಯ್ಯತ್ತಿನ ಮಾರ್ಗ ತೋರಿಸಿರುವನು. ಅವರು ಹೇಳುತ್ತಾರೆ: ನಾನು ಮನೆಗೆ ಮರಳಿದಾಗ ನನಗೆ ಹೆಚ್ಚು ಚಿಂತೆ ತಲೆದೋರಿತು. ಈ ಅಹ್ಮದಿಯರು ಯಾರು? ಇಮಾಮ್ ಅವರನ್ನು ಕಾಫಿರ್ ಎಂದು ಏಕೆ ಹೇಳುತ್ತಾರೆ ಎಂದು ಯೋಚಿಸಿ ನಾನು ಬಹಳ ಪ್ರಾರ್ಥಿಸಿದೆ. "ಓ ಅಲ್ಲಾಹ್ ನೀನೇ ನನಗೆ ಮಾರ್ಗದರ್ಶನ ನೀಡು" ಎಂದು ಪ್ರಾರ್ಥಿಸಿದೆ. ನಾನು ನನ್ನ ಪ್ರದೇಶದ ಜನರೊಂದಿಗೆ ಅಹ್ಮದಿಯ್ಯತ್ ಬಗ್ಗೆ ಕೇಳುತ್ತಾ ಇದ್ದೆ. ಆದರೆ ಜಮಾಅತ್‌ನೊಂದಿಗೆ ಸಂಪರ್ಕ ಹೊಂದುವ ಮಾರ್ಗ ಕಾಣಿಸಲಿಲ್ಲ. ಕೊನೆಗೆ ಒಬ್ಬ ಸ್ನೇಹಿತ ಹೇಳಿದರು– ವಲ್‌ವಾ ಎಂಬ ನಗರದಲ್ಲಿ ಅಹ್ಮದಿಯಾ ಜಮಾಅತ್ ಇದೆ ಎಂದು. ಹಾಗೆ ನಾನು ಆ ನಗರಕ್ಕೆ ಹೋಗಿ ಹುಡುಕುತ್ತಾ ಮಿಶನ್ ಹೌಸ್‌ಗೆ ತಲಪಿದೆನು. ಅಲ್ಲಿದ್ದ ಮಿಶನರಿ ನನಗೆ ಅಹ್ಮದಿಯಾ ಜಮಾಅತಿನ ಪರಿಚಯ ಮಾಡಿಕೊಟ್ಟರು. ಅಲ್ಲಿದ್ದ ಫೋಟೋ ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ನಾನು ವಿಚಾರಿಸಿದಾಗ ಮಿಶನರಿ ಸಾಹಿಬ್ ಹೇಳಿದರು– ಇಮಾಮ್ ಮಹ್‌ದಿ ಮತ್ತು ಮಸೀಹ್ ಇವರೇ ಆಗಿದ್ದಾರೆ. ನಾನು ಕೂಡಲೆ ಅಲ್ಲಿಯೇ ಅಹ್ಮದಿಯ್ಯತ್ ಸ್ವೀಕರಿಸಿದೆ. ನಾನು ಮಿಶನರಿಯೊಂದಿಗೆ ಹೇಳಿದೆ ಈ ಮಹಾನುಭಾವರನ್ನು ನಾನು ಸ್ವಪ್ನದಲ್ಲಿ ಎರಡು ಸಾರಿ ಕಂಡಿದ್ದೇನೆ. ನಾನು ಬೈಅತ್ ಫಾರ್ಮ್ ಈ ದಿನ ಭರ್ತಿಮಾಡಿದ್ದರೂ ನನಗೆ ಅಲ್ಲಾಹನು ಸ್ವಪ್ನ ಮೂಲಕ ಮಾರ್ಗದರ್ಶನ ನೀಡಿದ ದಿನದಿಂದ ಮೊದಲುಗೊಂಡು ನಾನು ಅಹ್ಮದಿ ಆಗಿದ್ದೇನೆ.

ಬೆಲ್‌ಜಿಯಮ್ ದೇಶದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: ಬೆಲ್‌ಜಿಯಮ್‌ನಲ್ಲಿ ಹೊಸದಾಗಿ ಅಹ್ಮದಿಯಾದ ಇದ್ರೀಸ್ ಸಾಹೇಬರು ಸ್ವಪ್ನದಲ್ಲಿ ಒಬ್ಬ ಮಹಾನುಭಾವರನ್ನು ಕಂಡರು. ಅನಂತರ ಎರಡು ವರ್ಷಗಳ ಹಿಂದೆ ಒಂದು ದಿನ ಟಿ.ವಿ. ಚ್ಯಾನಲ್‌ಗಳನ್ನು ಬದಲಾಯಿಸುತ್ತಾ ಇದ್ದಾಗ ಅಚಾನಕಾಗಿ **ಎಂ.ಟಿ.ಎ. ಅಲ್ ಅರಬಿಯ್ಯಾ**ವನ್ನು ಕಂಡರು. ಅವರು ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರವನ್ನು ಕಂಡಾಗ ಕೂಡಲೆ ಅವರಿಗೆ ಅವರು ಹಿಂದೆ ಕಂಡ ಸ್ವಪ್ನ ನೆನಪಿಗೆ ಬಂತು. ನಾನು ಇದೇ ಮಹಾನುಭಾವರನ್ನು ಸ್ವಪ್ನದಲ್ಲಿ ಕಂಡಿದ್ದೆ ಎಂದು ಅವರಿಗೆ ತಿಳಿಯಿತು. ಅನಂತರ ಅವರು ಎಂ.ಟಿ.ಎ. ನೋಡಲು ತೊಡಗಿದರು. ಅವರ ಹೃದಯ ಅಹ್ಮದಿಯ್ಯತ್ ಕಡೆಗೆ ಒಲಿಯಲು ಪ್ರಾರಂಭಿಸಿತು. ಅವರು ಸ್ವತಃ ಬೆಲ್‌ಜಿಯಮ್‌ನಲ್ಲಿ ಅಹ್ಮದಿಯಾ ಜಮಾಅತಿನ ವಿಳಾಸ ಹುಡುಕಿ ಕಂಡು ಹಿಡಿದರು. ಅವರು ಮಿಶನ್ ಹೌಸ್ ತಲಪಿ ಬೈಅತ್ ಮಾಡಲು ಆಗಮಿಸಿದ್ದೇನೆಂದು ಹೇಳಿದರು. ಅಲ್ಲಿದ್ದ ಮುರಬ್ಬಿ ಸಾಹಿಬ್ ಹೇಳಿದರು: ಜಮಾಅತಿನ ಬಗ್ಗೆ ಓದಿ ಸ್ವಲ್ಪ ಮಾಹಿತಿ ಗಳಿಸಿರಿ. ಅನಂತರ ತೀರ್ಮಾನ ಮಾಡಿರಿ ಎಂದು ಹೇಳಿದರು. ಆಗ ಅವರು ಹೇಳಿದರು: ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರ ಲಭಿಸಿದೆ. ನನ್ನ ಹೃದಯ ಮೊದಲೇ ಸಮಾಧಾನ ಹೊಂದಿತ್ತು. ಅವರು ಬೈಅತ್ ಮಾಡಿದರು.

ನೋಡಿರಿ, ನಾನು ಹೇಳಿದಂತೆ ಅಲ್ಲಾಹನು ಆಫ್ರಿಕದ ದೂರದ ದೇಶಗಳಲ್ಲಿ ಜನರ ಹೃದಯಗಳನ್ನು ತೆರೆಯುತ್ತಿರುವ ಹಾಗೆಯೇ

ಯುರೋಪಿನಲ್ಲಿಯೂ ಹೃದಯಗಳನ್ನು ತೆರೆಯುತ್ತಿದ್ದಾನೆ. ಶತ್ರುಗಳು ನಮ್ಮ ಮಾರ್ಗದಲ್ಲಿ ತಡೆಯೊಡ್ಡಲು ಪ್ರಯತ್ನಿಸುತ್ತಿರುವಾಗ, ವಿರೋಧವು ವರ್ಧಿಸುತ್ತಾ ಹೋಗುತ್ತಿರುವಾಗ, ಅಲ್ಲಾಹನು ತನ್ನ ಅನುಗ್ರಹದಿಂದ ಅವರ ಬಾಯಿ ಮುಚ್ಚಿಸುವ ವ್ಯವಸ್ಥೆ ಸಹ ಮಾಡುತ್ತಾ ಇರುತ್ತಾನೆ. ಹೊಸದಾಗಿ ಅಹ್ಮದಿಯರಾಗುವ ಜನರ ವಿಶ್ವಾಸ ವರ್ಧಿಸುವ ವ್ಯವಸ್ಥೆಯನ್ನು ಸಹ ಮಾಡುತ್ತಾನೆ.

ಅಲ್ಲಾಹನು ನೀಡಿದ ಅನುಗ್ರಹಗಳಿಗೆ ಸಂಬಂಧಿಸಿ ಕೆಲವು ಘಟನೆಗಳನ್ನು ಮಾತ್ರ ನಾನಿಲ್ಲಿ ವಿವರಿಸಿದ್ದೇನೆ. ಇಂತಹ ಘಟನೆಗಳು ಅಸಂಖ್ಯಾತವಾಗಿವೆ. ನಾವು ಯಾವಾಗಲೂ ಅಲ್ಲಾಹನ ಅನುಗ್ರಹವನ್ನು ಪಡೆಯುತ್ತಿರುವವರಾಗಿ ಮುಂದುವರಿಯುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ. ನಾವು ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರಾಗುವಂತೆ ಮಾಡಲಿ. ನಮಗೆ ಅಹ್ಮದಿಯ್ಯತ್‌ಗೆ ಸೇರುವ ಭಾಗ್ಯ ನೀಡಿ ಅಲ್ಲಾಹನು ಔದಾರ್ಯ ದಯಪಾಲಿಸಿದ ಹಾಗೆ, ನಾವು ಅದರಲ್ಲಿ ಸ್ಥಿರತೆಯಿಂದಿರುವ ಭಾಗ್ಯವನ್ನು ಸಹ ಅಲ್ಲಾಹನು ನಮಗೆ ನೀಡಲಿ. ನಾವು ನಮ್ಮ ವಿಶ್ವಾಸದಲ್ಲಿ ದೃಢವಾಗಿ ಮುಂದುವರಿಯುವಂತೆ ಅಲ್ಲಾಹನು ಮಾಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 26-08-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon